ಆ ದಿನ ರಾಜ್‌ಕೋಟ್ ಅಂಗಳದಲ್ಲಿ 18ರ ಹುಡುಗ ಪೃಥ್ವಿ ಶಾ ತಾನು ಆಡಿದ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಶತಕ ಬಾರಿಸುವುದೇ ತಡ ಕಾರ್ಪೊರೇಟ್ ಜಗತ್ತು ದಿಗ್ಗನೆ ಎದ್ದು ಕುಳಿತಿತು. ಜಾಹೀರಾತು ಜಗತ್ತಿಗೆ ಒಬ್ಬ ಹೊಸ ತಾರೆ ಸಿಕ್ಕ ಪುಳಕ.

ಆ ಉತ್ಸಾಹದ ಭರದಲ್ಲಿ ಒಂದೆರಡು ಇ ಕಾಮರ್ಸ್ ಕಂಪನಿಗಳು ಪೃಥ್ವಿಯ ಸಾಧನೆಯನ್ನು ಬಳಸಿಕೊಂಡು ಸ್ಲೋಗನ್ ಕೂಡ ಪ್ರಚಾರ ಮಾಡಿಬಿಟ್ಟವು. ಇದೀಗ ಪೃಥ್ವಿಯ ಆರ್ಥಿಕ ವಹಿವಾಟು ನಿರ್ವಹಿಸುವ ಸಂಸ್ಥೆಯು ಆ ಎರಡೂ ಕಂಪನಿಗಳಿಗೆ ನೋಟಿಸ್ ಜಾರಿ ಮಾಡಿದೆ. ಅನುಮತಿ ಇಲ್ಲದೇ ತಮ್ಮ ಜಾಹೀರಾತಿಗೆ ಪೃಥ್ವಿ ಹೆಸರು ಮತ್ತು ಸಾಧನೆಯನ್ನು ಬಳಸಿಕೊಂಡದ್ದಕ್ಕಾಗಿ ಒಂದು ಕೋಟಿ ರೂಪಾಯಿ ಪರಿಹಾರ ನೀಡಬೇಕು ಎಂದು ಬೇಡಿಕೆ ಇಟ್ಟಿದೆ.

ಸಿನಿಮಾ ತಾರೆಯರನ್ನು ಬಿಟ್ಟರೆ ಉತ್ಪನ್ನಗಳ ಜಾಹೀರಾತುಗಳಿಗೆ ಕ್ರಿಕೆಟಿಗರಿಗೇ ಹೆಚ್ಚು ಬೇಡಿಕೆ. ಸಚಿನ್, ಸೌರವ್, ಯುವರಾಜ್ ಅವರಂತಹ ದಿಗ್ಗಜರು ನೇಪಥ್ಯಕ್ಕೆ ಸರಿದ ಮೇಲೆ ಹೊಸ ಮುಖಗಳ ಹುಡುಕಾಟ ಜೋರಾಗಿದೆ. ಮಹೇಂದ್ರಸಿಂಗ್ ದೋನಿ ಕೂಡ ಈಗ ನಿವೃತ್ತಿಯ ಅಂಚಿಗೆ ಸರಿಯುತ್ತಿದ್ದಾರೆ. ಉದ್ಯಮ ಜಗತ್ತಿಗೆ ವಿರಾಟ್ ಕೊಹ್ಲಿ ಒಬ್ಬರೇ ಸಿಗುತ್ತಿದ್ದಾರೆ. ಆದರೆ ಮುಂಬೈ ಮಹಾನಗರಿಯಿಂದ ಉದಯಿಸುವ ತಾರೆಯೆಂದರೆ ಜಾಹೀರಾತು ಕಂಪನಿಗಳಿಗೆ ಒಂದು ಗುಂಜಿ ಪ್ರೀತಿ ಜಾಸ್ತಿ. ಇದೀಗ ಪೃಥ್ವಿ ಶಾ ನವತಾರೆಯಾಗಿ ಬೆಳಗುವ ಹಾದಿಯಲ್ಲಿದ್ದಾರೆ.



ಪೃಥ್ವಿ ತಮ್ಮ ಪದಾರ್ಪಣೆ ಪಂದ್ಯದಲ್ಲಿಯೇ ಗಳಿಸಿದ ಶತಕ ಹಲವು ದಾಖಲೆಗಳನ್ನು ಪುಡಿಗಟ್ಟಿತು. ರಣಜಿ, ದುಲೀಪ್ ಟ್ರೋಫಿ ಟೂರ್ನಿ ಮತ್ತು ಟೆಸ್ಟ್ ಕ್ರಿಕೆಟ್‌ನಲ್ಲಿ ಪದಾರ್ಪಣೆ ಪಂದ್ಯದಲ್ಲಿ ಶತಕ ಬಾರಿಸಿದ ಖ್ಯಾತಿ ಅವರದ್ದು. ಅಷ್ಟೇ ಅಲ್ಲ ಹೋದ ಫೆಬ್ರುವರಿಯಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕತ್ವ ವಹಿಸಿದ್ದ ಶ್ರೇಯವೂ ಅವರದ್ದು. ಅದರೊಂದಿಗೆ ಕರ್ನಾಟಕದ ರಾಹುಲ್ ದ್ರಾವಿಡ್ ಅವರ ಅಚ್ಚುಮೆಚ್ಚಿನ ಶಿಷ್ಯ ಬಳಗದಲ್ಲಿರುವ ಪ್ರಮುಖ ಆಟಗಾರ ಈ ಪೃಥ್ವಿ.

ಕೈ ಹಿಡಿದು ನಡೆಸಿದ ಅಪ್ಪ

ಹದಿನೈದು ವರ್ಷಗಳ ಹಿಂದೆ ಮುಂಬೈನ ವಿರಾರ್ ಪ್ರದೇಶದ ಗಲ್ಲಿಗಳಲ್ಲಿ ಮೂರು ವರ್ಷದ ಬಾಲಕನೊಬ್ಬ ಬ್ಯಾಟ್ ಹಿಡಿದು ಅಂಗಳಕ್ಕಿಳಿದಿದ್ದ. ಆತನ ಆಟ ನೋಡಲು ಸುತ್ತಮುತ್ತಲಿನವರೆಲ್ಲ ಸೇರಿದ್ದರು. ಚೋಟುದ್ದ ಹುಡುಗ ತನಗಿಂತ ಹಿರಿಯ ಆಟಗಾರರ ಎಸೆತಗಳನ್ನು ಲೀಲಾಜಾಲವಾಗಿ ಹೊಡೆಯುತ್ತಿದ್ದ ರೀತಿಗೆ ನೋಡಿದವರು ಬೆರಗಾಗಿದ್ದರು. ಅವರ ತಾಯಿ ಸಂತಸದಿಂದ ಮಗನನ್ನು ಅಪ್ಪಿ ಮುದ್ದಾಡಿದ್ದರು.

ಎಲ್ಲವೂ ಚೆನ್ನಾಗಿದೆ ಎನ್ನುವಾಗಲೇ ಪೃಥ್ವಿ ನಾಲ್ಕು ವರ್ಷದವರಾಗಿದ್ದಾಗ ಅಮ್ಮ ನಿಧನರಾದರು. ಸಿದ್ಧ ಉಡುಪುಗಳ ವ್ಯಾಪಾರ ನಡೆಸುತ್ತಿದ್ದ ತಂದೆ ಪಂಕಜ್ ಅವರ ಮುಂದೆ ದೊಡ್ಡ ಸವಾಲು ಎದುರಾಗಿತ್ತು. ತಮ್ಮ ಸಣ್ಣ ಅಂಗಡಿಯನ್ನು ನಿರ್ವಹಿಸುತ್ತಲೇ ಮಗನನ್ನು ತರಬೇತಿ ಮತ್ತು ಶಾಲೆಗೆ ಕರೆದುಕೊಂಡು ಹೋಗಿ ಬರುವುದು ಸವಾಲಿನ ಕೆಲಸವಾಯಿತು. ಎಳೆಯ ಹುಡುಗ ಚೆನ್ನಾಗಿ ಆಡುವುದನ್ನು ನೋಡುತ್ತಿದ್ದ ಅವರ ಕಣ್ಣಂಚುಗಳು ಜಿನುಗುತ್ತಿದ್ದವು. ಮನಸ್ಸು ವೇದನೆಯಲ್ಲಿ ಮುಳುಗುತ್ತಿತ್ತು. 'ನನ್ನ ಕಷ್ಟಗಳಿಗೆ ಮಗನ ಭವಿಷ್ಯ ಬಲಿ ಕೊಡಲು ಮನಸ್ಸಾಗಲಿಲ್ಲ. ಅದಕ್ಕಾಗಿ ವ್ಯಾಪಾರ ನಿಲ್ಲಿಸಿದೆ. ಪೃಥ್ವಿಯ ಹಿಂದೆ ನಿಂತೆ' ಎಂದು ಪಂಕಜ್ ಕ್ರೀಡಾ ಜಾಲತಾಣಕ್ಕೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು.

ಪೃಥ್ವಿಯನ್ನು ಬಾಂದ್ರಾದಲ್ಲಿದ್ದ 'ಮಿಡ್ಲ್ ಇನ್‌ಕಮ್ ಗ್ರೂಪ್' (ಎಂ.ಐ.ಜಿ) ಕ್ರಿಕೆಟ್ ಕ್ಲಬ್‌ಗೆ ಸೇರಿಸಿದರು. ಪ್ರತಿದಿನ ಬೆಳಿಗ್ಗೆ ವಿರಾರ್‌ನಿಂದ 6.09ಕ್ಕೆ ಹೊರಡುತ್ತಿದ್ದ ಲೋಕಲ್ ಟ್ರೇನ್‌ನಲ್ಲಿ ಮಗನನ್ನು ಕರೆದುಕೊಂಡು ಬಾಂದ್ರಾಗೆ ಬರುತ್ತಿದ್ದರು. ಅದಕ್ಕಾಗಿ ಬೆಳಗಿನ ಜಾವ 4.30ಕ್ಕೆ ಎದ್ದು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದ್ದರು. ವಿರಾರ್‌ನಿಂದ ಬಾಂದ್ರಾಗೆ ಲೋಕಲ್ ರೈಲಿನಲ್ಲಿ ಓಡಾಡುವುದು ಸುಲಭದ ಮಾತಲ್ಲ. ಜನಜಂಗುಳಿಯ ಮಧ್ಯೆ ದೊಡ್ಡ ಕ್ರಿಕೆಟ್ ಕಿಟ್ ಕಾಪಾಡಿಕೊಂಡು, ಜನರ ಬೈಗುಳಗಳನ್ನು ಸಹಿಸಿಕೊಂಡು ಪಯಣಿಸುವ ಕಷ್ಟ ಅನುಭವಿಸಿದವರಿಗೇ ಗೊತ್ತು. ಪೃಥ್ವಿಯನ್ನು ಮರಳಿ ಮನೆಗೆ ಕರೆದುಕೊಂಡು ಬಂದು ಶಾಲೆಗೆ ಕಳಿಸುತ್ತಿದ್ದರು.

ಪಂಕಜ್ ಅವರು ಅದೆಷ್ಟೋ ಹಗಲುಗಳನ್ನು ಶಾಲೆಯ ಹೊರಗಿನ ಕಟ್ಟೆಯ ಮೇಲೆ ಮತ್ತು ಸಂಜೆಗಳನ್ನು ತರಬೇತಿ ಅಕಾಡೆಮಿಯ ಮೈದಾನದ ಮೆಟ್ಟಿಲುಗಳ ಮೇಲೆ ಕಳೆದರು. ಅಪ್ಪನ ಶ್ರಮ ವ್ಯರ್ಥವಾಗಲು ಪೃಥ್ವಿ ಬಿಡಲಿಲ್ಲ. ದಿನದಿಂದ ದಿನಕ್ಕೆ ಅವರ ಆಟ ರಂಗೇರಿತು. ಶಾಲಾಮಟ್ಟದ ಟೂರ್ನಿಗಳಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಆಗಿ ರನ್‌ಗಳ ಹೊಳೆ ಹರಿಸಿದರು.

2010ರಲ್ಲಿ ಹಿರಿಯ ಎಡಗೈ ಸ್ಪಿನ್ನರ್ ನೀಲೇಶ್ ಕುಲಕರ್ಣಿ ಅವರ ಕಣ್ಣಿಗೆ ಬಿದ್ದ ಪೃಥ್ವಿಯ ಜೀವನಕ್ಕೆ ಹೊಸ ತಿರುವು ಲಭಿಸಿತ್ತು. ನೀಲೇಶ್ ಮಾಲೀಕತ್ವದ ಕ್ರೀಡಾ ಮ್ಯಾನೇಜ್‌ಮೆಂಟ್ ಗ್ರೂಪ್ ಪೃಥ್ವಿಗೆ ಪ್ರಾಯೋಕತ್ವ ನೀಡಿತು. ವಾರ್ಷಿಕ ಮೂರು ಲಕ್ಷ ರೂಪಾಯಿ ನೀಡುವ ಒಪ್ಪಂದ ಮಾಡಿಕೊಂಡಿತು. ಅದೇ ವರ್ಷ 'ಆಪ್ ಎಂಟರ್‌ಟೇನ್‌ಮೆಂಟ್ ಸಂಸ್ಥೆ'ಯೂ ಸಹಾಯಹಸ್ತ ಚಾಚಿತು. ಇದರಿಂದಾಗಿ ಪೃಥ್ವಿ ಮತ್ತು ಪಂಕಜ್ ಅವರು ಮುಂಬೈನ ಸಾಂತಾಕ್ರೂಜ್‌ಗೆ ಬಂದು ನೆಲೆಸಿದರು. ಇದರಿಂದ ಅಭ್ಯಾಸಕ್ಕೆ ಹೆಚ್ಚಿನ ಸಮಯ ವಿನಿಯೋಗಿಸಲು ಸಾಧ್ಯವಾಯಿತು.

2012ರಿಂದ ಎಂ.ಐ.ಜಿ ಮತ್ತು ರಿಜ್ವಿ ಸ್ಪ್ರಿಂಗ್‌ಫೀಲ್ಡ್ ಶಾಲಾ ತಂಡಗಳ ನಾಯಕತ್ವವನ್ನು ಪೃಥ್ವಿ ವಹಿಸಿಕೊಂಡರು. 16 ವರ್ಷದೊಳಗಿನವರ ಮುಂಬೈ ತಂಡಕ್ಕೆ ಆಯ್ಕೆಯಾದರು. ಅದೇ ವರ್ಷ ಅವರಿಗೆ ಇಂಗ್ಲೆಂಡ್‌ನ ಮ್ಯಾಂಚೆಸ್ಟರ್‌ನ ಶೀಡ್ಲ್ ಹಲ್ಮ್ ಶಾಲೆಯ ಪರ ಆಡುವ ಆಹ್ವಾನ ಸಿಕ್ಕಿತು. ಅಲ್ಲಿ ಎರಡು ತಿಂಗಳು ಆಡಿದ ಅವರು 1446 ರನ್ ಪೇರಿಸಿದರು. ಆಫ್‌ಸ್ಪಿನ್ನರ್ ಕೂಡ ಆಗಿರುವ ಪೃಥ್ವಿ 68 ವಿಕೆಟ್‌ಗಳನ್ನೂ ಕಬಳಿಸಿದರು. ಅಲ್ಲಿಯ ಅನುಭವದಿಂದ ಅವರ ಆಟ ಮತ್ತಷ್ಟು ಪುಷ್ಟಿಗೊಂಡಿತು.

2013ರ ನವೆಂಬರ್‌ನಲ್ಲಿ 'ಹ್ಯಾರಿಸ್ ಶೀಲ್ಡ್ ಎಲೈಟ್ ಡಿವಿಷನ್ ಕ್ರಿಕೆಟ್ ಟೂರ್ನಿ'ಯಲ್ಲಿ ರಿಜ್ವಿ ಸ್ಪ್ರಿಂಗ್‌ಫೀಲ್ಡ್ ಶಾಲೆ ತಂಡದ ಪರ 546 (336 ಎಸೆತ) ರನ್‌ಗಳನ್ನು ಹೊಡೆದು ದಾಖಲೆ ಬರೆದರು. ತಂಡವು 991 ರನ್ ಗಳಿಸಿತ್ತು. ಎದುರಾಳಿ ತಂಡ ಸೇಂಟ್ ಫ್ರಾನ್ಸಿಸ್ ಡಿ ಅಸ್ಸಿಸ್ 93 ರನ್‌ಗಳಿಗೆ ಆಲೌಟ್ ಆಗಿತ್ತು. 1899ರಲ್ಲಿ ಎ.ಇ.ಜೆ. ಕಾಲಿನ್ಸ್ (ಔಟಾಗದೆ 628) ಮತ್ತು 1901ರಲ್ಲಿ ಚಾರ್ಲ್ಸ್ ಈಡಿಸ್ (566) ಅವರ ನಂತರ ದಾಖಲಾದ ಅತ್ಯಧಿಕ ಸ್ಕೋರ್ ಇದಾಗಿತ್ತು. 500 ರನ್‌ಗಳ ವೈಯಕ್ತಿಕ ಸ್ಕೋರ್ ದಾಟಿದ ಭಾರತದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಯೂ ಅವರದ್ದಾಗಿತ್ತು.1933ರಲ್ಲಿ ದಾದಾಭಾಯಿ ಹವೇವಾಲಾ ಅವರು ಬಾಂಬೆ ತಂಡದ ಪರ 515 ರನ್ ಹೊಡೆದಿದ್ದರು. 2016ರಲ್ಲಿ ಮುಂಬೈನವರೇ ಆದ ಪ್ರಣವ್ ಧನವಾಡೆ (1009 ರನ್) ಈ ಎಲ್ಲ ದಾಖಲೆಗಳನ್ನು ಮೀರಿದ್ದರು.

'ಪೃಥ್ವಿ ಪ್ರತಿಭಾನ್ವಿತ ಆಟಗಾರ. ಆದರೆ ಸಾಗಬೇಕಾದ ಹಾದಿ ಬಹುದೂರ ಇದೆ. ಇಂದಿನ ಸ್ಪರ್ಧಾತ್ಮಕ ಕ್ರಿಕೆಟ್‌ನಲ್ಲಿ ಹೆಚ್ಚು ಎತ್ತರಕ್ಕೆ ಬೆಳೆಯಲು ನಿರಂತರ ಶ್ರಮಿಸಬೇಕು. ಇದು ಸಾಧನೆಯ ಆರಂಭವಷ್ಟೇ' ಎಂದು ಕೋಚ್ ರಾಹುಲ್ ದ್ರಾವಿಡ್ ಹೇಳುತ್ತಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಹರಾಜಿನಲ್ಲಿ ಪೃಥ್ವಿ ಅವರನ್ನು ಡೆಲ್ಲಿ ಡೇರ್‌ಡೆವಿಲ್ಸ್ ತಂಡವು 1.2 ಕೋಟಿ ರೂಪಾಯಿ ಕೊಟ್ಟು ಖರೀದಿಸಿತ್ತು. ಆ ತಂಡಕ್ಕೂ ಅವರು ರನ್‌ಗಳ ಕಾಣಿಕೆ ನೀಡಿ ತಮ್ಮ ಹೆಜ್ಜೆಗುರುತು ಮೂಡಿಸಿದ್ದರು. ಇದೀಗ ಟೆಸ್ಟ್‌ನಲ್ಲಿ ಆರಂಭಿಕ ಆಟಗಾರನಾಗಿ ಭರ್ಜರಿ ಆರಂಭ ಮಾಡಿದ್ದಾರೆ.

ಸಾಧನೆಯ ಶಿಖರ ಏರುವುದು ಸುಲಭವಲ್ಲ. ಆದರೆ ಅವರ ಕಲಾತ್ಮಕ ಬ್ಯಾಟಿಂಗ್ ಮತ್ತು ಆತ್ಮವಿಶ್ವಾಸ ಭರಿತ ನಡೆನುಡಿಗಳು ಹಾದಿಯನ್ನು ಸುರಳೀತಗೊಳಿಸಬಹುದು.